ಓ. ಎಸ್. ನಂಃ 116/2014

ಪಿ. ಡಬ್ಲ್ಯೂಃ 2

ದಿಃ26-09-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಫ್ ಎಸ್ ಕೆ ಪ್ರತಿವಾದಿ ಪರ ವಕೀಲರಿಂದ ಃ

ನಾನು ಗುಡ್ಡದ ಒಣಿ, ಶಿಗ್ಗಾವನಲ್ಲಿ ಖಾಯಂ ಆಗಿ ಇರುತ್ತೇನೆ. ನನಗೆ 1 ನೇ ವಾದಿ ಮತ್ತು 1 ನೇ ಪ್ರತಿವಾದಿಯವರ ಪರಿಚಯ ಇರುತ್ತದೆ. ನನ್ನ ಮನೆ ಗುಡ್ಡದ ಒಣಿಯಲ್ಲಿ ಇರುತ್ತದೆ . 1 ನೇ ವಾದಿ ಮತ್ತು 1 ನೇ ಪ್ರತಿವಾದಿಯವರ ಮನೆಯೂ ಗುಡ್ಡದ ಒಣಿಯಲ್ಲಿ ಇರುತ್ತದೆ. ನನಗೆ 1 ನೇ ಪ್ರತಿವಾದಿಯವರು ಗೊತ್ತಿರುತ್ತಾರೆ. 1 ನೇ ಪ್ರತಿವಾದಿಯವರ ಶಿಶುವಿನಹಾಳದ ಹೊಲಕ್ಕೆ ಕೆಲಸಕ್ಕೆ 10-12 ವರ್ಷ ಹೋಗಿರುತ್ತೇನೆ. ಸುಮಾರು 4-5 ತಿಂಗಳದಿಂದ ಕೆಲಸಕ್ಕೆ ಹೋಗಿಲ್ಲ. ಶಿಗ್ಗಾವ ದಿಂದ ಶಿಶುವಿನಹಾಳ 15-16 ಕಿ ಮಿ ಆಗುತ್ತದೆ . 10-12 ವರ್ಷದ ಹಿಂದೆ ನನಗೆ 150 ರೂಪಾಯಿ ಕೂಲಿಯನ್ನು ಕೊಡುತ್ತಿದ್ದರು . 4-5 ತಿಂಗಳು ಹಿಂದೆ 200 -250 ರೂಪಾಯಿ ಕೂಲಿಯನ್ನು ಕೊಡುತ್ತಿದ್ದರು. ಶಿಗ್ಗಾವದಿಂದ ಶಿಶುವಿನಹಾಳಕ್ಕೆ ಟಾಟಾ ಎ ಸಿ ಮಾಡಿಕೊಂಡು 8-10 ಜನ ಹೋಗುತ್ತಿದ್ದೆವು. ಹೊಗಲು ಬರಲು 1 ತಾಸು ಆಗುತ್ತಿತ್ತು ಎಂದರೆ ಸರಿ. ಶಿಶುವಿನಹಾಳದಲ್ಲಿ ಸಾಕಷ್ಟು ಕೂಲಿ ಜನರು ಸಿಗುತ್ತಾರೆ ಎಂದರೆ ಸರಿ. ನಾನು ಈಗಲೂ ಕೂಲಿ ಕೆಲಸ ಮಾಡುತ್ತಿದ್ದೇನೆ. ನಾನು 4-5 ತಿಂಗಳಿಂದ ಅವರ ಹೊಲಕ್ಕೆ ಕೂಲಿ ಕೆಲಸಕ್ಕೆ ಹೋಗಿಲ್ಲ.

2. ದಾವಾ ಆಸ್ತಿಯು ಹುಬ್ಬಳ್ಳಿ ದಳಬಂಜನ ಅವರು ಖರೀದಿ ಹಿಡಿದಿರುತ್ತಾರೆ ಎಂದರೆ ಸರಿ. ಯಾವ ಕಾಲಕ್ಕೆ ಅವರು ಖರೀದಿ ಹಿಡಿದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಹೊಲಕ್ಕೆ ಹೋಗಿರುತ್ತೇನೆ ಎಂದು ಹೇಳಿದ್ದು ಅದು ಯಾವ ದಿಕ್ಕಿನಲ್ಲಿ ಇರುತ್ತದೆ ಎಂದು ನನಗೆ ದಿಕ್ಕು ಹೇಳಲು ಬರುವುದಿಲ್ಲ. ಅದರ ಆಸ್ತಿ ನಂಬರ ನನಗೆ ಗೊತ್ತಿಲ್ಲ. ಈಗ ಸದ್ಯೆ ಗೋವಿನಜಾಳ ಪೀಕನ್ನು ಹಾಕಿರುತ್ತಾರೆ. ನಾನು 4-5 ತಿಂಗಳ ಇಂದ ಹೋಗಿಲ್ಲ ಎನ್ನುವ ಮಾತು ಸರಿ ಇರುತ್ತದೆ . ನಾಗರಾಜ ಅವರ ಅಜ್ಜ ತಿಪ್ಪಣ್ಣ ಅವರು ಗೊತ್ತು , ಅವರು ಸುಮಾರು 40 ವರ್ಷದಿಂದ ಶಿಗ್ಗಾವನಲ್ಲಿ ಬಂದು ನೆಲೆಸಿದರು ಎಂದರೆ ಸರಿ.

ಶಿಶುವಿನಹಾಳಕ್ಕೆ ಹೋಗಿ ಬಂದು ವ್ಯವಸಾಯ ಮಾಡಲು ಆಗದೇ ಇರುವ ಕಾರಣಕ್ಕೆ ಅವರು ದಳಬಂಜನ ಅವರಿಗೆ ಜಮೀನು ಮಾರಾಟ ಮಾಡಿದರು ಎಂದರೆ ಸರಿ. ದಳಬಂಜನ ಅವರು ಖರೀದಿ ಹಿಡಿದ ದಿನದಿಂದ ಇವತ್ತಿನವರಗೂ ಸದರಿ ಜಮೀನಿನ ಕಬ್ಜಾ ಹಾಗೂ ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ನಾಗರಾಜ ಅವರ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.